**Witness duly sworn on 24.03.2026**

**Cross examination by Advocate for Respondent :**

ಲಲಿತಾದ್ರಿಪುರ ಗ್ರಾಮದ ಸರ್ವೆ ನಂಬರ್ 147/4 ಎ ಮತ್ತು 147/4 ಬಿ ವಿಸ್ತೀರ್ಣ 32 ಗುಂಟೆ ಜಮೀನಿಗೆ ನಾವು ಮಾಲೀಕರು ಇರುತ್ತೇವೆ ಎಂದರೆ ಸರಿ. ಸದರಿ ಆಸ್ತಿಯನ್ನು ಮೂಡಾದವರು ಲಾಲ್ ಬಹದ್ದೂರ್ ಶಾಸ್ತ್ರಿ ಬಡಾವಣೆ ಮಾಡುವ ಸಲುವಾಗಿ ಸ್ವಾಧೀನಪಡಿಸಿಕೊಂಡಿದ್ದರು ಎಂದರೆ ಸರಿ. ಸರ್ಕಾರದವರು ಕೊಟ್ಟಂತಹ ಪರಿಹಾರ ಸಾಕಾಗುವುದಿಲ್ಲ ಎಂದು ಹೇಳಿ LAC. No.319/2005 ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನ್ಯಾಯಾಲಯವೂ ಒಂದು ಎಕರೆಗೆ 17,67,767/- ರೂಪಾಯಿಗಳನ್ನು ದಿನಾಂಕ 12.11.2013 ರಂದು ಆದೇಶ ಆಗಿತ್ತು ಎಂದರೆ ಸರಿ. ನಾವು ಆ ಹಣವನ್ನು ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಅಮಲ್ಜಾರಿ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ನ್ಯಾಯಾಲಯವೂ ಆದೇಶ ಮಾಡಿದ ಮೇಲೆ ಆ ಹಣವನ್ನು ಪಡೆದುಕೊಳ್ಳಬೇಕು ಎಂದು ನಮಗೆ ಮಾಹಿತಿ ಇತ್ತು ಎಂದರೆ ಸರಿ. ಪೂರ್ತಿ ಪರಿಹಾರದ ಹಣವನ್ನು ತೆಗೆದುಕೊಂಡಿದ್ದೆವು ಎಂದರೆ ಸರಿ.

ಈ ಹಿಂದೆ ವಕೀಲರ ಮುಖಾಂತರ ಅಮಲ್ಜಾರಿ ಅರ್ಜಿ ಸಲ್ಲಿಸಿ ಹಣ ತೆಗೆದುಕೊಂಡಿದ್ದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಮ್ಮ ಪರವಾಗಿ ಹಾಜರಾಗಿದ್ದ ವಕೀಲರು ಇ-ಲೋಕಾದಲತಿ ನಲ್ಲಿ ಜಂಟಿ ಮೆಮೋವನ್ನು ಸಲ್ಲಿಸಿ ಪರಿಹಾರದ ಹಣವನ್ನು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಮೂಲ LAC. No. 319/2005 ದಿನಾಂಕ 12.11.2013 ರಂದು ತೀರ್ಮಾನ ಆದ ಮೇಲೆ ಪ್ರಸ್ತುತ ಮೇಲ್ಮನವಿ ಸಲ್ಲಿಸುವವರೆಗೆ ಮೇಲ್ಮನವಿ ಸಲ್ಲಿಸಲು ತೊಂದರೆ ಇತ್ತು. ನನ್ನ ಪ್ರಮಾಣ ಪತ್ರದಲ್ಲಿ ಹಣದ ತೊಂದರೆ ಇಂದ ಅಪೀಲನ್ನು ಸಲ್ಲಿಸಲು ಆಗಿರಲಿಲ್ಲ ಎಂದು ಹೇಳಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ LAC No. 80/2015 ರ ಪ್ರಕರಣದಲ್ಲಿ ಹೆಚ್ಚಿನ ಪರಿಹಾರ ಪಡೆದುಕೊಂಡಿರುತ್ತಾರೆ ಎಂದು ಹೇಳಿ ನಾನು ಈ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಮೇಲ್ಮನವಿ ಸಲ್ಲಿಸಲು ನಮ್ಮ ಪಕ್ಕದ ಜಮೀನಿನವರೆಗೆ ಹೆಚ್ಚಿನ

ಪರಿಹಾರ ಬಂದಿರುತ್ತದೆ ಎಂದು ಹೇಳುವ ಕಾರಣ ಬಿಟ್ಟು ಬೇರೆ ಕಾರಣ ಇರಲಿಲ್ಲ ಎಂದರೆ ಸರಿಯಲ್ಲ. ಬೇರೆ ಕಾರಣ ಇತ್ತು. ಮೂಡಾ ದವರು ನಮಗೆ ಈಗಾಗಲೇ ನ್ಯಾಯಾಲಯದ ಆದೇಶದ ಪ್ರಕಾರ ಪರಿಹಾರವನ್ನು ಕೊಟ್ಟಿರುವುದರಿಂದ ಮಧ್ಯಂತರ ಅರ್ಜಿ ಮತ್ತು ಮೇಲ್ಮನವಿ ಸಲ್ಲಿಸಲು ನಮಗೆ ಯಾವುದೇ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನ್ಯಾಯಾಲಯದಿಂದ ಯಾವುದೇ ಪರಿಹಾರ ಪಡೆಯಲು ನಾವು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ.

**TYPED TO MY DICTATION IN THE OPEN COURT.**

***R. O. I. & A. C.,***

***IV ADJ.,***
***MYSORE.***